# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 320 |
| 2 | ಸದಸ್ಯರ ಹೆಸರು | ಶ್ರೀ ಗೋವಿಂದರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 23.09.2020 |
| 4 | ಉತ್ತರಿಸುವ ಸಚಿವರ | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ದುರಸ್ತಿ ಮಾಡಲು ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಕೋಲಾರ ಜಿಲ್ಲಾ ವ್ಯಾಪ್ತಿಯ ತಾಲ್ಲೂಕುಗಳಲ್ಲಿ ಈ ಕೆಳಕಂಡಂತೆ ದುರಸ್ತಿ ಪ್ರಕರಣಗಳು ಬಾಕಿಯಿರುತ್ತವೆ.
<table>
<tr><th>ಕ್ರಮ ಸಂಖ್ಯೆ</th><th>ತಾಲ್ಲೂಕು</th><th>ಪ್ರಕರಣಗಳು</th></tr>
<tr><td>1</td><td>ಕೋಲಾರ</td><td>1898</td></tr>
<tr><td>2</td><td>ಮಾಲೂರು</td><td>6570</td></tr>
<tr><td>3</td><td>ಬಂಗಾರಪೇಟೆ</td><td>4720</td></tr>
<tr><td>4</td><td>ಕೆ.ಜಿ.ಎಫ್.</td><td>6592</td></tr>
<tr><td>5</td><td>ಶ್ರೀನಿವಾಸಪುರ</td><td>383</td></tr>
<tr><td>6</td><td>ಮುಳಬಾಗಿಲು</td><td>5866</td></tr>
<tr><td></td><td>ಒಟ್ಟು</td><td>26029</td></tr>
</table>
</td></tr>
<tr><td>ಆ)</td><td>ದುರಸ್ತಿ ಮಾಡಲು ಬಂದ ಅರ್ಜಿಗಳನ್ನು ಮೂಲ ದಾಖಲೆಗಳಿಲ್ಲವೆಂದು ಹಿಂಬರಹ ನೀಡುತ್ತಿರುವುದು ನಿಜವೇ;</td><td rowspan="3">ಮೂಲ ದಾಖಲೆಗಳು ಇಲ್ಲದಿದ್ದಲ್ಲಿ, ಸರ್ಕಾರದ ಸುತ್ತೋಲೆ ಸಂ.ಕಂಇ 08 ಎಲ್‌ಜಿಪಿ 2016, ದಿನಾಂಕ: 20.06.2016 ರಂತೆ ಮಂಜೂರಿಗೆ ಸಂಬಂಧಿಸಿದಂತೆ ಲಭ್ಯವಿರುವ ಇತರೆ ಪರ್ಯಾಯ ಮಾಹಿತಿ/ದಾಖಲೆಗಳ ಆಧಾರದಿಂದ ಅಥವಾ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 136(3) ರಡಿ ನೈಜತೆ ಖಾತ್ರಿಪಡಿಸಿಕೊಂಡು ಗೈರು ವಿಲೆ ಕಡತಗಳನ್ನು ತಯಾರಿಸಿ ಜಿಲ್ಲಾ ಮಟ್ಟದ ಗೈರು ವಿಲೇ ಕಡತಗಳ ಪುನರ್ ನಿರ್ಮಾಣ ಸಮಿತಿಯ ಅನುಮೋದನೆಯನ್ನು ಪಡೆದು ನಿಯಮಾನುಸಾರ ದುರಸ್ತಿಗೆ ಕ್ರಮವಹಿಸಲಾಗುವುದು.</td></tr>
<tr><td>ಇ)</td><td>ಹಾಗಿದ್ದಲ್ಲಿ, ತಾಲ್ಲೂಕು ರೆಕಾರ್ಡ್ ರೂಂಗಳಲ್ಲಿ ಮೂಲ ದಾಖಲೆಗಳ ಲಭ್ಯವಿರುವುದಿಲ್ಲವೇ; ಹಾಗಿದ್ದಲ್ಲಿ, ಮೂಲ ದಾಖಲೆಗಳು ಇಲ್ಲದೆ ಇರಲು ಕಾರಣಗಳೇನು;</td></tr>
<tr><td>ಈ)</td><td>ತಾಲ್ಲೂಕು ರೆಕಾರ್ಡ್ ರೂಂಗಳಲ್ಲಿ ಮೂಲ ದಾಖಲೆಗಳು ಲಭ್ಯವಿಲ್ಲದಿದ್ದಾಗ ದುರಸ್ತಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲು (ವಿಲೆ) ಸರ್ಕಾರ ಅನುಸರಿಸುತ್ತಿರುವ ಮಾನದಂಡ ಗಳೇನು;</td></tr>
<tr><td>ಉ)</td><td>ದಾಖಲೆಗಳ ಕೊಠಡಿಗಳಲ್ಲಿ ಬಹುತೇಕ ಮೂಲ ದಾಖಲೆಗಳು ನಾಪತ್ತೆ ಯಾಗಲು ಕಾರಣಗಳೇನು;</td><td rowspan="2">ಹಳೇ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ರೆಕಾರ್ಡ್ ಕೋಣೆಯಲ್ಲಿ (ಅಭಿಲೇಖಾಲಯದಲ್ಲಿ) ಇದ್ದ ಕಡತಗಳನ್ನು ನೂತನ ಮಿನಿ ವಿಧಾನಸೌಧ ಕಟ್ಟಡಕ್ಕೆ ಸ್ಥಳಾಂತರಿಸಿದಾಗ ತುಂಬಾ ಹಳೆಯದಾದ ಕಡತಗಳು ಶಿಥಿಲಗೊಂಡಿರುತ್ತವೆ.</td></tr>
<tr><td>ಊ)</td><td>ಈ ಮೂಲ ದಾಖಲೆಗಳು ನಾಪತ್ತೆ ಯಾಗಲು ಕಾರಣಕರ್ತರಾದ ಅಧಿಕಾರಿ/ ಸಿಬ್ಬಂದಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮ ಗಳೇನು?</td></tr>
</table>

**<u>ಸಂಖ್ಯೆ: ಕಂಇ 127 ಎಸ್‌ಎಸ್‌ಸಿ 2020</u>**

**(ಆರ್.ಅಶೋಕ)**
ಕಂದಾಯ ಸಚಿವರು